**Akashvani : Bangalore**
**National Bulletin In Kannada**
**23.03.2024 / 19.35 hrs**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**23.03.2024 / 19.35 hrs**

**<><*<><>*><>**

<u>ಮುಖ್ಯಾಂಶಗಳು</u>

೧. ಲೋಕಸಭಾ ಚುನಾವಣೆ; ಈ ಬಾರಿ ಸುಮಾರು ೧ ಕೋಟಿ ೮೦ ಲಕ್ಷ ನವ ಮತದಾರರು- ಚುನಾವಣಾ ಆಯೋಗ

೨. ಭಾರತ-ಭೂತಾನ್ ಮೈತ್ರಿ ಬಲವರ್ಧನೆ- ಪ್ರಧಾನಮಂತ್ರಿ

೩. ಜಿಲ್ಲಾಮಟ್ಟದ ನ್ಯಾಯಾಲಯಗಳನ್ನು ಸದೃಢಗೊಳಿಸುವ ಅವಶ್ಯಕತೆಯಿದೆ- ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಸೂರ್ಯಕಾಂತ್

೪. ರಷ್ಯಾದಲ್ಲಿ ಭಯೋತ್ಪಾದಕ ದಾಳಿ; ಅಂತಾರಾಷ್ಟ್ರೀಯ ಸಮುದಾಯಗಳ ಖಂಡನೆ

೫. ಐಪಿಎಲ್ ಟಿ-೨೦ ಕ್ರಿಕೆಟ್; ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ ಜಯ

**<><*<><>*><>**

೨೦೨೪ರ ಲೋಕಸಭಾ ಚುನಾವಣೆಯಲ್ಲಿ ಅಂದಾಜು ಒಂದು ಕೋಟಿ ೮೦ ಲಕ್ಷ ನವ ಮತದಾರರು ತಮ್ಮ ಅಮೂಲ್ಯ ಹಕ್ಕನ್ನು ಮೊದಲ ಬಾರಿಗೆ ಚಲಾಯಿಸಲಿದ್ದಾರೆ. ಇವರೆಲ್ಲ ೧೮-೧೯ರ ಪ್ರಾಯದವರು. ಮೊದಲ ಬಾರಿಗೆ ಮತ ಚಲಾಯಿಸುವ ಯುವಕರಿಗೆ ಅವರ ಈ ಪವಿತ್ರ ಕರ್ತವ್ಯದ ಮಹತ್ವವನ್ನು ಮನಗಾಣಿಸುವ ಸಲುವಾಗಿ ಸಾಮಾಜಿಕ ಜಾಲತಾಣಗಳಲ್ಲಿ 'ನಾನು ಖಂಡಿತ ಮತ ಚಲಾಯಿಸುತ್ತೇನೆ' ಎನ್ನುವ ಪ್ರಚಾರ ಆಂದೋಲನಗಳು ನಡೆಯುತ್ತಿವೆ. ಈ ಬಾರಿ ಚುನಾವಣೆಯಲ್ಲಿ ಭಾಗವಹಿಸುವ ಯುವ ಮತದಾರರ ಪೈಕಿ ೨೦ ರಿಂದ ೨೯ ವರ್ಷ ವಯೋಮಾನದ ಅಂದಾಜು ೧೯ ಕೋಟಿ ೭೪ ಲಕ್ಷ ಮತದಾರರು ಪಾಲ್ಗೊಳ್ಳಲಿದ್ದಾರೆ. ೧೮ ವರ್ಷಕ್ಕೆ ಮತದಾನದ ಹಕ್ಕು ದೊರೆಯುವುದಾದರೂ ಈಗ ೧೭ ವರ್ಷ ತುಂಬಿರುವ ಯುವಜನ ಸಮೂಹದಿಂದ ೧೩.೪ ಲಕ್ಷಕ್ಕೂ ಅಧಿಕ ಅರ್ಜಿಗಳನ್ನು ಮುಂಚಿತವಾಗಿಯೇ ಸ್ವೀಕರಿಸಲಾಗಿದೆ. ಕೇಂದ್ರ ಚುನಾವಣಾ ಆಯೋಗ ಯುವ ಜನರಿಗೆ ಮತದಾನಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಸಚಿನ್ ತೆಂಡೂಲ್ಕರ್ ಮತ್ತು ರಾಜಕುಮಾರ್ ರಾವ್ ಅವರಂತಹ ರಾಷ್ಟ್ರೀಯ ದಿಗ್ಗಜರಿಂದ ಸಂದೇಶಗಳನ್ನು ಪ್ರಸಾರ ಮಾಡುತ್ತಿದೆ.

**<><*<><>*><>**

ಭೂತಾನ್ ಭೇಟಿ ಸಂದರ್ಭದಲ್ಲಿ ಅಲ್ಲಿನ ಧುರೀಣರೊಂದಿಗೆ ನಡೆಸಲಾದ ಮಾತುಕತೆಯಿಂದ ಭಾರತ- ಭೂತಾನ್ ಮೈತ್ರಿ ಬಲಗೊಂಡಂತಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಭೂತಾನ್‌ನ ಎರಡು ದಿನಗಳ ಭೇಟಿಯ ನಂತರ ಇಂದು ದೆಹಲಿಗೆ ವಾಪಸ್ಸಾದ ಪ್ರಧಾನಮಂತ್ರಿ ನರೇಂದ್ರ ಮೋದಿ, ತಮ್ಮ ಭೂತಾನ್ ಭೇಟಿ ತುಂಬಾ ವಿಶೇಷವಾಗಿತ್ತು. ಭೂತಾನ್ ದೊರೆ ಮತ್ತು ಪ್ರಧಾನಮಂತ್ರಿ ಅವರೊಂದಿಗೆ ಭೇಟಿ ಕೂಡ ಹಾರ್ದಿಕವಾಗಿತ್ತು. ಈ ಧುರೀಣರೊಂದಿಗೆ ನಡೆಸಲಾದ ಮಾತುಕತೆಯಿಂದ ಉಭಯ ದೇಶಗಳ ಮೈತ್ರಿ ಬಲಗೊಳ್ಳಲಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಭೂತಾನ್ ಜನರ ಆತ್ಮೀಯತೆ ಮತ್ತು ಆತಿಥ್ಯಗಳಿಗೆ ಧನ್ಯವಾದ ತಿಳಿಸಿರುವ ಪ್ರಧಾನಮಂತ್ರಿ ಅವರು, ಭಾರತ ಭೂತಾನ್ ವಿಶ್ವಾಸಾರ್ಹ ಭಾಗಿದಾರಿ ಸ್ನೇಹಪರ ದೇಶವಾಗಿ ಇರಲಿದೆ ಎಂದು ಹೇಳಿದ್ದಾರೆ. ಭೂತಾನ್ ದೊರೆ ಜಿಗ್ಮೆ ಕೇಸರ್ ನ್ಯಾಮ್‌ಗೇಲ್ ವಾಂಗ್‌ಚುಕ್, ವಿಶೇಷ ಗೌರವದ ದ್ಯೋತಕವಾಗಿ ವಿಮಾನ ನಿಲ್ದಾಣಕ್ಕೂ ಬಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಬೀಳ್ಕೊಟ್ಟರು.

ಇದಕ್ಕೂ ಮುನ್ನ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಭಾರತ ಸರ್ಕಾರದ ನೆರವಿನಿಂದ ಥಿಂಪುವಿನಲ್ಲಿ ನಿರ್ಮಿಸಲಾದ ಗ್ಯಾಲ್ಟ್ಸನ್ ಜೆಟ್ಸನ್ ತಾಯಿ-ಮಗು ಆಸ್ಪತ್ರೆಯನ್ನು ಉದ್ಘಾಟಿಸಿದರು. ಒಂದನೇ ಹಂತದಲ್ಲಿ ೧೫೦ ಹಾಸಿಗೆ ಸಾಮರ್ಥ್ಯದ ಈ ಆಸ್ಪತ್ರೆಯನ್ನು ೨೨ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಇದು ೨೦೧೯ ರಿಂದ ಕಾರ್ಯ ನಿರ್ವಹಿಸುತ್ತಿದೆ. ಪ್ರಸ್ತುತ ಸೌಲಭ್ಯವನ್ನು ಎರಡನೇ ಹಂತದಲ್ಲಿ ೧೧೯ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ತಾಯಿ ಮತ್ತು ಮಗು ಆರೋಗ್ಯಕ್ಕಾಗಿ ಉತ್ತಮ ಸೇವಾ ಸೌಲಭ್ಯ ಹೊಂದಿದೆ.

**<><*<><>*><>**

ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಡಾ.ಎಸ್.ಜೈಶಂಕರ್ ಅವರು, ಮೂರು ದಿನಗಳ ಭೇಟಿಗಾಗಿ ಸಿಂಗಾಪುರ್ ತಲುಪಿದರು. ಅವರು, ಅಲ್ಲಿ ನೇತಾಜಿ ಸುಭಾಷ್ ಚಂದ್ರಬೋಸ್ ಹಾಗೂ ಇಂಡಿಯನ್ ನ್ಯಾಷನಲ್ ಆರ್ಮಿಯ ಶೂರ ಸೈನಿಕರಿಗೆ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ತಮ್ಮ ಭೇಟಿ ಪ್ರಾರಂಭಿಸಿದ್ದಾಗಿ ಜೈಶಂಕರ್ ಅವರು, ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

**<><*<><>*><>**

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ನವದೆಹಲಿಯಲ್ಲಿರುವ ಜರ್ಮನಿಯ ಉಪ ಮುಖ್ಯಸ್ಥರನ್ನು ಕರೆಯಿಸಿ, ವಿದೇಶಾಂಗ ಕಚೇರಿಯ ವಕ್ತಾರರು ಭಾರತದ ಆತಂರಿಕ ವ್ಯವಹಾರಗಳ ಕುರಿತು ನೀಡಿದ ಟೀಕೆ ಬಗ್ಗೆ ತನ್ನ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿತು. ಇಂತಹ ಹೇಳಿಕೆಗಳು ಭಾರತದ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ವ್ಯವಸ್ಥೆಯನ್ನು ಕಡೆಗಣಿಸುವಂತಹ ವರ್ತನೆಯಾಗಿದೆ ಎಂದು ಪರಿಗಣಿಸುವುದಾಗಿ ತಿಳಿಸಿದೆ. ಭಾರತ, ಸದೃಢವಾದ ಕಾನೂನು ವ್ಯವಸ್ಥೆ ಹೊಂದಿರುವ ಬಲಿಷ್ಠವಾದ ಪ್ರಜಾತಂತ್ರವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

**<><*<><>*><>**

ಹಿಮಾಚಲ ಪ್ರದೇಶದ ಆರು ಮಾಜಿ ಶಾಸಕರು ನವದೆಹಲಿಯಲ್ಲಿಂದು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಕೇಂದ್ರ ಸಚಿವ ಅನುರಾಗ್ ಸಿಂಗ್ ಠಾಕೂರ್ ಹಾಗೂ ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಅವರ ಸಮ್ಮುಖದಲ್ಲಿ ಸುಧೀರ್ ಶರ್ಮಾ, ರವಿ ಠಾಕೂರ್, ಇಂದೆರ್ ದತ್ ಲಕನ್‌ಪಾಲ್, ದೇವೇಂದ್ರ ಭುಟ್ಟೋ ಮತ್ತು ಚೈತನ್ಯ ಶರ್ಮಾ ಬಿಜೆಪಿ ಸೇರಿದರು.

**<><*<><>*><>**

ಅರುಣಾಚಲ ಪ್ರದೇಶದಲ್ಲಿ ಎರಡು ಲೋಕಸಭಾ ಕ್ಷೇತ್ರ ಹಾಗೂ ವಿಧಾನಸಭೆಯ ೬೦ ಸ್ಥಾನಗಳಿಗಾಗಿ ಏಪ್ರಿಲ್ ೧೯ ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಈ ತಿಂಗಳ ೨೦ ರಂದು ಅಧಿಸೂಚನೆ ಹೊರಬಿದ್ದಿದ್ದು, ನಾಮಪತ್ರ ಸಲ್ಲಿಕೆಗೆ ಮಾರ್ಚ್ ೨೭ ಕೊನೆಯ ದಿನ. ವಿಧಾನ ಸಭೆಯ ಅವಧಿ ಜೂನ್ ೨ ರಂದು ಮುಗಿಯಲಿರುವ ಕಾರಣ ವಿಧಾನಸಭಾ ಮತ ಎಣಿಕೆ ಜೂನ್ ೨ರಂದೇ ನಡೆಯಲಿದೆ. ಲೋಕಸಭಾ ಚುನಾವಣೆ ಮತ ಎಣಿಕೆ ಜೂನ್ ೪ ರಂದು ನಡೆಯಲಿದೆ. ಅರುಣಾಚಲ ಪ್ರದೇಶದಲ್ಲಿ ೮ ಲಕ್ಷ ೮೨ ಸಾವಿರದ ೮೧೬ ಮತದಾರರಿದ್ದಾರೆ. ಇದರಲ್ಲಿ ೪ ಲಕ್ಷ ೩೩ ಸಾವಿರದ ೭೬೦ ಪುರುಷ ಹಾಗೂ ೪ ಲಕ್ಷ ೪೯ ಸಾವಿರದ ೫೦ ಮಹಿಳಾ ಮತದಾರಿದ್ದಾರೆ. ಇದೇ ಮೊದಲ ಬಾರಿಗೆ ಐವರು ತೃತೀಯ ಲಿಂಗಿ ಮತದಾರರು ಇದ್ದಾರೆ. ಒಟ್ಟು ೨ ಸಾವಿರದ ೨೨೬ ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ನಮ್ಮ ಇಟಾನಗರ ಪ್ರತಿನಿಧಿ ವರದಿ ಮಾಡಿದ್ದಾರೆ.

**<><*<><>*><>**

ಮಧ್ಯಪ್ರದೇಶದಲ್ಲಿ ಮೊದಲ ಹಂತದಲ್ಲಿ ಚುನಾವಣೆ ನಡೆಯುತ್ತಿದ್ದು, ನಾಮಪತ್ರ ಸಲ್ಲಿಕೆ ಪ್ರಗತಿಯಲ್ಲಿದೆ. ಇದುವರೆಗೆ ದೊರೆತ ಮಾಹಿತಿ ಪ್ರಕಾರ ೧೬ ಅಭ್ಯರ್ಥಿಗಳು ೨೧ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಸಲು ಬುಧವಾರ ಮಾರ್ಚ್ ೨೭ ಕೊನೆಯ ದಿನವಾಗಿದೆ.

<><*<><>*><>

ಬಿಹಾರದ ಹಿರಿಯ ಕಾಂಗ್ರೆಸ್ ನಾಯಕಿ ಹಾಗೂ ಲೋಕಸಭೆಯ ಮಾಜಿ ಸ್ಪೀಕರ್ ಮೀರಾ ಕುಮಾರಿ, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ತಮ್ಮ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ತಿಳಿಸಿದ್ದಾರೆ.

<><*<><>*><>

೧೧೫ ಜನರ ಜೀವ ಬಲಿತೆಗೆದುಕೊಂಡ ರಷ್ಯಾ ಮೇಲಿನ ಭಯೋತ್ಪಾದಕ ದಾಳಿಯನ್ನು ಅಂತಾರಾಷ್ಟ್ರೀಯ ಸಮುದಾಯಗಳು ಖಂಡಿಸಿವೆ. ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟೆರೆಸ್, ಮಾಸ್ಕೋದ ಕ್ರೋಕಸ್ ಸಿಟಿ ಹಾಲ್ ಮೇಲೆ ಭಯೋತ್ಪಾದಕರು ನಿನ್ನೆ ನಡೆಸಿದ ದಾಳಿಯನ್ನು ಬಲವಾಗಿ ಖಂಡಿಸಿದ್ದಾರೆ ಹಾಗೂ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ರಷ್ಯಾ ಸರ್ಕಾರಕ್ಕೆ ಎಲ್ಲ ಸರ್ಕಾರಗಳು ಸರ್ವ ರೀತಿಯ ಸಹಕಾರ ನೀಡಬೇಕು ಎಂದು ವಿಶ್ವಸಂಸ್ಥೆಯ ಭದ್ರತಾಮಂಡಳಿ ಕರೆ ನೀಡಿದೆ. ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮಾಸ್ಕೋ ಮೇಲಿನ ಉಗ್ರರ ದಾಳಿಯನ್ನು ಖಂಡಿಸಿದ್ದಾರೆ. ಅಮೆರಿಕ, ಬ್ರಿಟನ್, ಫ್ರಾನ್ಸ್, ಐರೋಪ್ಯ ಸಮುದಾಯ, ಸ್ಪೇನ್ ಮತ್ತು ಯುಎಇ ಗಳು ಕೂಡ ದಿಗ್ಭ್ರಮೆ ವ್ಯಕ್ತಪಡಿಸಿವೆ. ಫ್ರಾನ್ಸ್ ಅಧ್ಯಕ್ಷ ಎಮ್ಮಾನ್ಯುಯೆಲ್ ಮ್ಯಾಕ್ರೋನ್, ಸಂತ್ರಸ್ಥ ಕುಟುಂಬಗಳಿಗೆ ಸಂತಾಪ ವ್ಯಕ್ತಪಡಿಸಿದ್ದಾರೆ. ಸ್ಪೇನ್ ಈ ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿದೆ. ಇಟಲಿ ಪ್ರಧಾನಮಂತ್ರಿ ಜಾರ್ಜಿಯಾ ಮೆಲೊನಿ, ಇದು ಭಯೋತ್ಪಾದಕರ ಅಕ್ಷಮ್ಯ ಕೃತ್ಯವಾಗಿದೆ ಎಂದಿದ್ದಾರೆ. ಇಸ್ಲಾಮಿಕ್ ಸ್ಟೇಟ್ ಖೋರಸ್ಸಾನ್ - ಐಎಸ್‌ಎಸ್-ಕೆ ನಿನ್ನೆಯ ಮಾಸ್ಕೋ ದಾಳಿಗೆ ತಾನು ಜವಾಬ್ದಾರ ಎಂದು ಹೇಳಿಕೊಂಡಿದೆ. ನಿನ್ನೆಯ ಘಟನೆಗೆ ಸಂಬಂಧಿಸಿದಂತೆ ನಾಲ್ವರು ಶಂಕಿತ ಬಂದೂಕುದಾರಿಗಳೂ ಸೇರಿದಂತೆ ಹನ್ನೊಂದು ಜನರನ್ನು ಬಂಧಿಸಲಾಗಿದೆ ಎಂದು ರಷ್ಯಾ ತಿಳಿಸಿದೆ. ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ ೧೧೫ಕ್ಕೆ ಏರಿದ್ದು, ಸುಮಾರು ೧೨೦ ಜನರು ಗಾಯಗೊಂಡಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ದುಃಖಸೂಚಕವಾಗಿ ನವದೆಹಲಿಯಲ್ಲಿರುವ ರಷ್ಯಾ ದೂತವಾಸದಲ್ಲಿ ರಷ್ಯಾ ಧ್ವಜವನ್ನು ಅರ್ಧಮಟ್ಟಕ್ಕೆ ಹಾರಿಸಿ ಸಂತಾಪ ಸೂಚಿಸಲಾಗಿದೆ.

<><*<><>*><>

ಪಂಜಾಬಿನ ಸಂಗ್ರೂರ್ ಜಿಲ್ಲೆಯ ವಿವಿಧ ಹಳ್ಳಿಗಳಲ್ಲಿ ವಿಷಯುಕ್ತ ಅಕ್ರಮ ಮದ್ಯ ಸೇವನೆಯಿಂದ ಇಂದು ಇನ್ನೂ ಆರು ಜನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಮೃತಪಟ್ಟವರ ಸಂಖ್ಯೆ ೨೦ಕ್ಕೆ ಏರಿದೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಶೇಷ ಪೊಲೀಸ್ ತಂಡ ತನಿಖೆ ನಡೆಸುತ್ತಿದ್ದು, ಇದುವರೆಗೆ ೮ ಮಂದಿಯನ್ನು ಬಂಧಿಸಲಾಗಿದೆ. ಈ ಮಧ್ಯೆ ಕೇಂದ್ರ ಚುನಾವಣಾ ಆಯೋಗ ಸಂಗ್ರೂರ್ ಘಟನೆಗೆ ಸಂಬಂಧಿಸಿದಂತೆ ಪಂಜಾಬ್ ಮುಖ್ಯ ಕಾರ್ಯದರ್ಶಿ ಹಾಗೂ ಡಿಜಿಪಿ ಅವರಿಂದ ತಕ್ಷಣ ವರದಿ ಪಡೆದು ಸಲ್ಲಿಸುವಂತೆ ಪಂಜಾಬ್ ಮುಖ್ಯ ಚುನಾವಣಾಧಿಕಾರಿಗಳಿಗೆ ತಿಳಿಸಿದೆ.

<><*<><>*><>

ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತ ರಾಷ್ಟ್ರ ಸಮಿತಿ ನಾಯಕಿ ಕೆ.ಕವಿತಾ ಅವರ ಜಾರಿ ನಿರ್ದೇಶನಾಲಯ ಕಸ್ಟಡಿಯನ್ನು ದೆಹಲಿಯ ರೋಸ್ ಅವೆನ್ಯೂ ಕೋರ್ಟ್, ಇದೇ ೨೬ರವರೆಗೆ ವಿಸ್ತರಿಸಿದೆ. ವಿಶೇಷ ಸಿಬಿಐ ನ್ಯಾಯಾಧೀಶರಾದ ಕಾವೇರಿ ಭವೇಜ್ ಈ ಬಗ್ಗೆ ಆದೇಶ ಹೊರಡಿಸಿದ್ದಾರೆ.

<><*<><>*><>

ಜಿಲ್ಲಾ ಹಂತದಲ್ಲಿ ನ್ಯಾಯಾಂಗ ವ್ಯವಸ್ಥೆಯನ್ನು ಸದೃಢಗೊಳಿಸುವ ಅವಶ್ಯಕತೆಯಿದೆ ಎಂದು ಸುಪ್ರೀಂಕೋರ್ಟ್ ನ್ಯಾಯಾಧೀಶ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದ್ದಾರೆ. ಅವರು, ಅಗರ್ತಲಾದ ತ್ರಿಪುರಾ ನ್ಯಾಯಾಂಗ ಅಕೆಡೆಮಿಯಲ್ಲಿ ನಡೆದ ಹತ್ತನೇ ನ್ಯಾಯಾಂಗ ಸಮಾವೇಶದಲ್ಲಿ ಮಾತನಾಡುತ್ತಿದ್ದರು. ಅನೇಕ ಜನರಿಗೆ ತಮ್ಮ ಸಮಸ್ಯೆಗಳಿಗಾಗಿ ನ್ಯಾಯ ಪಡೆಯಲು ಹೈಕೋರ್ಟ್‌ಗಳಿಗೆ ಬರುವ ಸಾಮರ್ಥ್ಯವಿರುವುದಿಲ್ಲ. ದೆಹಲಿಯಲ್ಲಿರುವ

ಸುಪ್ರೀಂಕೋರ್ಟ್‌ಗಳಿಗೂ ಕೆಲವೇ ಜನರಿಗೆ ಬರಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಮಟ್ಟದ ನ್ಯಾಯಾಲಯಗಳನ್ನು ಬಲಪಡಿಸುವ ಅಗತ್ಯವಿದೆ ಎಂದರು.

<><*<><>*><>

ಇದೇ ತಿಂಗಳ ೩೧ರ ಭಾನುವಾರದಂದು ಎಲ್ಲ ಬ್ಯಾಂಕ್‌ಗಳ ಶಾಖೆಗಳು ಕಾರ್ಯನಿರ್ವಹಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದೆ. ಪ್ರಸಕ್ತ ಹಣಕಾಸು ವರ್ಷದ ಕೊನೆಯ ದಿನ ಸರ್ಕಾರದ ಸ್ವೀಕೃತಿ ಮತ್ತು ಪಾವತಿಗಳಿಗೆ ಅನುಕೂಲವಾಗುವಂತೆ ವಹಿವಾಟುಗಳನ್ನು ನಡೆಸಲು ಬ್ಯಾಂಕ್‌ಗಳು ಕರ್ತವ್ಯ ನಿರ್ವಹಿಸಬೇಕೆಂಬ ಸರ್ಕಾರದ ಮನವಿ ಮೇರೆಗೆ ಆರ್‌ಬಿಐ ಈ ಸೂಚನೆ ನೀಡಿದೆ.

<><*<><>*><>

ಮೊಹಾಲಿಯಲ್ಲಿ ಇದೀಗ ಮುಕ್ತಾಯಗೊಂಡ ಐಪಿಎಲ್ ಕ್ರಿಕೆಟ್ ಟಿ-೨೦ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡ, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಗಳಿಸಿದೆ. ಗೆಲ್ಲಲು ೧೭೫ರನ್‌ಗಳ ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ ೧೯.೨ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೧೭೭ ರನ್ ಗಳಿಸಿತು. ಪಂಜಾಬ್ ಪರ ಸ್ಯಾಮ್ ಕರ್ರನ್ ೬೩ ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ ೩೮ ರನ್ ಪಡೆದರು. ಇದಕ್ಕೂ ಮುನ್ನ ಡೆಲ್ಲಿ ಕ್ಯಾಪಿಟಲ್ಸ್ ೯ ವಿಕೆಟ್ ನಷ್ಟಕ್ಕೆ ೧೭೪ ರನ್‌ಗಳಿಸಿತು. ಡೆಲ್ಲಿ ಕ್ಯಾಪಿಟಲ್ಸ್ ಪರ ಶಾಯ್‌ಹೋಪ್ ೩೩, ಡೇವಿಡ್ ವಾರ್ನರ್ ೨೯ ರನ್ ಪಡೆದರು. ಅಭಿಷೇಕ್ ಪೊರೆಲ್ ಅಜೇಯ ೩೨ ರನ್ ಗಳಿಸಿದರು. ಪಂಜಾಬ್ ಕಿಂಗ್ಸ್ ಪರ ಅರ್ಷದೀಪ್ ಸಿಂಗ್ ಮತ್ತು ಹರ್ಷಲ್ ತಲಾ ೨ ವಿಕೆಟ್ ಪಡೆದರು. ಕೊಲ್ಕತ್ತಾದಲ್ಲಿ ಇದೀಗ ಆರಂಭವಾಗಿರುವ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಸನ್‌ರೈಸರ್ಸ್ ಹೈದರಾಬಾದ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

**<><*<>** ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **<>*><>**

**<><*<>** ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಿಗ್ಗೆ ೭.೦೫ಕ್ಕೆ **<>*><>**